# ಅಪಘಾತ ಆಘಾತ...

ರಾತ್ರಿ ಹನ್ನೊಂದಾಗಿರಬೇಕು, ಆಫೀಸಿನವರೆಲ್ಲ ಸೇರಿ ಪಾರ್ಟಿಗೆ ಹೋಗಿದ್ದು ಸ್ವಲ್ಪ ಲೇಟಾಗಿ ಮನೆಗೆ ಹಿಂದಿರುಗುತ್ತಿದ್ದೆ, ಪಾರ್ಟಿ ಅಂದ್ರೆ ಲೇಟ ಆಗೇ ಆಗುತ್ತೆ, ಆ ಸಮಯದಲ್ಲಿ ವಾಹನ ಸಂಚಾರ ಕೂಡಾ ಕಮ್ಮಿ, ರಸ್ತೆಗಳು ಬಿಕೊ ಅನ್ನುತ್ತಿರುತ್ತವೆ ಅಲ್ಲಲ್ಲಿ ಕಾರು ಬೈಕುಗಳು ಶರವೇಗದಲ್ಲಿ ಸರ್ರೆಂದು ನುಗ್ಗುತ್ತಿರುತ್ತವೆ, ಬೈಕು ಕೊಂಡು ವರ್ಷವಾಯ್ತು, ಇತ್ತೀಚೆಗೆ ಸ್ವಲ್ಪ ಬೈಕು ಓಡಾಡಿಸಿ ರೂಢಿಯಾಗಿ ನಾನೂ ಸ್ವಲ್ಪ ವೇಗವಾಗಿ ಚಲಾಯಿಸುತ್ತೇನೆ ಆದರೂ ಗೆಳೆಯರೆಲ್ಲ ನನಗಿಂತ ಯಾವಾಗಲೂ ಮುಂದು, ತಕ್ಕಮಟ್ಟಿಗೆ ವೇಗ ಬಂದಿದೆಯೆಂದ್ರೆ ಸರಿ, ಹೀಗಾಗಿ ನಾನೂ ಸ್ವಲ್ಪ ವೇಗದಲ್ಲೇ ಹೊರಟಿದ್ದೆ, ಅದು ಮೈಸೂರು ರೋಡ್ ಶಿರ್ಸಿ ಸರ್ಕಲ್ ಹತ್ತಿರ ಫ್ಲೈ ಓವರ ಇಳಿಯುತ್ತಿದ್ದಂತೆ ಮುಂದೆ ಒಂದು ಕಾರು ಹೋಗುತ್ತಿತ್ತು ಹಿಂದೆ ಸ್ವಲ್ಪ ದೂರದಲ್ಲಿ ನಾನು, ಕಾರು ದಾಟಿ ಹೋಯ್ತು, ನಾ ಹಿಂದೆ ಬರಬೇಕು, ರೋಡಲ್ಲಿ ಹಿಡಿಗಾತ್ರದ ಕೆಲವು ಕಲ್ಲುಗಳು ಚೆಲ್ಲಪಿಲ್ಲಿಯಾಗಿ ಹರಡಿದ್ದವು, ಕತ್ತಲೆಯಲ್ಲಿ ವೇಗದಲ್ಲಿ, ನನ್ನ ಗಮನ ಆಕಡೆ ಹರಿಯದೇ ಕಲ್ಲುಗಳಲ್ಲಿ ಬೈಕು ಓಡಿತು, ಮುಂದಿನ ಚಕ್ರ ನಿಯಂತ್ರಣ ತಪ್ಪಿತು, ಧಡ್! ಅಂತ ಶಬ್ದದೊಂದಿಗೆ ಪಲ್ಟಿ ಹೊಡೆದು, ನೆಲಕ್ಕೆ ಉಜ್ಜುತ್ತ ಸ್ವಲ್ಪ ದೂರ ಹೋಗಿ ಬಿದ್ದೆ, ಬೈಕು ಕೈ ತಪ್ಪಿ ನನಗಿಂತ ಮುಂದೆ ಸ್ವಲ್ಪ ದೂರದಲ್ಲಿ ಹೋಗಿ ಬಿತ್ತು...

ಸ್ವಲ್ಪ ಹೊತ್ತು ಹಾಗೆ ಬಿದ್ದಿದ್ದೆ, ಮುಂದೆ ಬೈಕು ಇನ್ನೂ ಸದ್ದು ಮಾಡುತ್ತ ತಿರುಗುತ್ತಿತ್ತು... ಅಪಘಾತವಾಗಿತ್ತು... ಏನಾಗಿದೆ, ಏನಾಗುತ್ತಿದೆ, ಯಾಕಾಯ್ತು, ಏನೂ ತಿಳಿಯುತ್ತಿಲ್ಲ ಆಘಾತ ಆಗ ಶುರುವಾಗಿತ್ತು, ಕೂಡಲೇ ಸಾವರಿಸಿಕೊಂಡು ಮೇಲೇಳಲು ಪ್ರಯತ್ನಿಸಿದೆ ಆಗುತ್ತಿರಲಿಲ್ಲ, ಆಗಲೇ ಹತ್ತಿರದಲ್ಲಿರುವ ಕೆಲ ಜನ ಬಂದು ಏಳಿಸಿದ್ದು, ಯಾರೊ ಬೈಕು ಎತ್ತಿ ತಂದರು, ಬೈಕು ತೆಗೆದುಕೊಂಡು ದಾರಿ ಪಕ್ಕಕ್ಕೆ ಬಂದೆ, ಎಲ್ಲರಿಗೂ ಅನಿಸಿರಬೇಕು ಯಾರೋ ಡ್ರಿಂಕ್ಸ ಮಾಡಿ ನಿಯಂತ್ರಣವಿಲ್ಲದೇ ಬಿದ್ದಿರಬೇಕೆಂದು, ಆಗಲ್ಲೇ ಬಂದ ಪೋಲೀಸಗಂತೂ(ಟ್ರಾಫಿಕ ಅಲ್ಲ ಸಿವಿಲ್ ಸಧ್ಯ, ಇಲ್ಲಾಂದ್ರೆ ಎಲ್ಲಿ ಏನು ಕಾರಣ ಹೇಳಿ ಫೈನು ಹಾಕುತ್ತಿದ್ದರೊ) ಅದೇ ಅನುಮಾನ ಕಾಡಿರಬೇಕು, ಏನಾಯ್ತು ಅನ್ನೊದನ್ನ ಸ್ವತಃ ಪ್ರತ್ಯಕ್ಷದರ್ಶಿಯೊಬ್ಬ ವಿವರಿಸಿದಾಗಲೇ ನನಗೂ ಗೊತ್ತಾಗಿದ್ದು, ಹೇಗೆ ನನಗೆ ನಿಯಂತ್ರಣ ತಪ್ಪಿತೆಂದು, ಆಗಲೇ ನಾ ನೋಡಿದ್ದು ಆ ಚೆಲ್ಲಾಪಿಲ್ಲಿ ಕಲ್ಲುಗಳನ್ನು... ನಾ ನೋಡಿದ್ದರೆ ಅದಹೇಗೆ ಆಗುತ್ತಿತ್ತು... ಅಂತೂ ಪೋಲಿಸಗೆ ಏನಾಗಿದೆ ಅಂತ ಖಾತ್ರಿ ಆಯಿತು ಸ್ವಲ್ಪ ಸುಧಾರಿಸಿಕೊಳ್ಳಲು ಹೇಳಿ ಅಲ್ಲೆ ನಿಂತರು, ನಾ ಡ್ರಿಂಕ್ಸ ಮಾಡೋದಿಲ್ಲ(ಹಾಗಂತ ನೀರೂ ಕುಡಿಯೋದಿಲ್ಲ ಅನ್ಕೋಬೇಡಿ!) ಮಾಡೋರಿಗೆ ಮಾತ್ರ ಕಂಪನಿ ಕೊಡುತ್ತೇನೆ, ಕೂತು ಕೊಲ್ಡಡ್ರಿಂಕ್ಸೊ ಜ್ಯೂಸೊ ಯಾವುದೊ ಹೀರುತ್ತ ಎಲ್ಲರೊಡನೆ ಹಿರಿಹಿರಿ ಹಿಗ್ಗುತ್ತಿದ್ದರೆ ಹೆಚ್ಚು, ಅದೇನು ನನ್ನ ದೊಡ್ಡತನವೆಂದು ನಾ ಹೇಳಿಕೊಳ್ಳುವುದಿಲ್ಲ, ಅದು ನನ್ನ ವೈಯಕ್ತಿಕ ಆಯ್ಕೆ, ನನಗಿಷ್ಟವಿಲ್ಲ ಅಷ್ಟೇ. ಸ್ವಲ್ಪ ಕೂತವನು ಕೂರಲಾಗದೇ, ಮತ್ತೆ ಮೇಲೆದ್ದು ಹೊರಟೆ.

ಹಾಗೂ ಹೀಗೂ ಮನೆಗೆ ಬಂದು ತಲುಪಿದೆ, ಗಿಯರ್ ಲೀವರು ಮಣಿದು ಗಿಯರು ಸರಿಯಾಗಿ ಹಾಕಲು ಬರುತ್ತಿಲ್ಲದೇ ಪಡಿಪಾಟಲು ಪಟ್ಟೆ, ಗೇಟಿನಲ್ಲಿ ಗಾಡಿ ನಿಲ್ಲಿಸುವಾಗ ಪಕ್ಕದ ಮನೆ ಪದ್ದುಗೆ ಸಿಗ್ನಲ್ಲು ಕೊಡಬೇಕಲ್ಲ, ಇಂಡಿಕೇಟರ ಒಡೆದಿತ್ತು ನೋಡಿ ಅವಳೂ ಗಾಬರಿಯಾದ್ರೆ? ಅದಕ್ಕೆ ಸುಮ್ಮನೆ ಮನೆಯೊಳಕ್ಕೆ ಸೇರಿಕೊಂಡೆ. ಇವಳು ಮಲಗಿದ್ದು, ಎಬ್ಬಿಸಲೋ ಬೇಡವೊ ಯೋಚಿಸಿದೆ, ಏಳಿಸಿದ್ರೆ ಹೆದರಿ ಕಂಗಾಲಾಗುವುದು ಗ್ಯಾರಂಟಿ, ಏಳಿಸದಿದ್ರೆ ನಾಳೆ ನಾ ಕಂಗಾಲಾಗಬೇಕು ಅಷ್ಟು ಬಯ್ಯುತ್ತಾಳೆ, ಏಳಿಸೋದೇ ವಾಸಿ ಅಂತ ಮೆತ್ತಗೆ ಕರೆದೆ. ಎದ್ದು ಕಣ್ಣು ತೀಡುತ್ತ ಹೊರಬಂದ್ಲು, ಬೂಟು ತೆರೆಯಲಾಗದೇ ಹಾಲಿನಲ್ಲಿ ಕುಸಿದು ಕೂತಿದ್ದೆ, ಬಂದವಳೇ ನನ್ನ ನೋಡಿ "ರೀ ಏನಾಯ್ತು!!!" ಅಂತ ಹೌಹಾರಿದ್ಲು. ಈಗ ಅವಳಿಗೆ ಆಘಾತವಾಗಿತ್ತು ನಿಜಕ್ಕೂ... "ಏನಿಲ್ಲ ಸ್ವಲ್ಪ ಆಕ್ಸಿಡೆಂಟು ಆಯ್ತು" ಅಂದೆ "ಏನು, ಸ್ವಲ್ಪ ಆಕ್ಸಿಡೆಂಟ್ ಆಯ್ತಾ, ನೋಡಿ ಇದು" ಅಂತ ಜಾಕೆಟ್ಟು(ಜರ್ಕಿನ್) ತೊರಿಸಿದ್ಲು... ಹೌದು ಎಡ ಭಾಗ ಎಲ್ಲ ಕೆತ್ತಿ ಕಿತ್ತು ಬಂದಿತ್ತು, ಗ್ಲೌಸು ಬಿಚ್ಚಿಟ್ಟೆ, ಕೈಗೆ ಸ್ವಲ್ಪ ತರಚು ಗಾಯಗಳಾಗಿದ್ವು, ಮೊಣಕಾಲಿಗೆ ಏಟು ಬಿದ್ದು ಉಬ್ಬಿತ್ತು, ಎಡ ಪಕ್ಕೆಲುಬು ನೋವಾಗುತ್ತಿತ್ತು. "ಇದು ಸ್ವಲ್ಪಾನಾ ನಿಮ್ಗೆ, ಏನ್ ಮಾಡ್ಕೊಂಡ್ರಿ" ಅಂತನ್ನುತ್ತ ಬೂಟು ತೆಗೆಯಲು ಹೆಲ್ಪ ಮಾಡಿದ್ಲು, ಅವಳ ಕಣ್ಣಲ್ಲಿ ನೀರಾಡುತ್ತಿತ್ತು, ಹೆದರಿಕೆ, ಸಿಡುಕು, ದುಃಖ ಎಲ್ಲ ಭಾವನೆಗಳ ಮಿಶ್ರಣ ಮೂಡಿತ್ತು.

ಎದ್ದು ಕೈಕಾಲು ತೊಳೆದು ಬಂದೆ, ಪಕ್ಕೆಲುಬಿಗೆ ಸ್ವಲ್ಪ ಜಾಸ್ತಿಯೆ ನೋವಾದಂತಿತ್ತು, ನಡೆಯಲು ಸರಿಯಾಗಿ ಬರುತ್ತಿರಲಿಲ್ಲ ಅವಳು ಊರುಗೋಲಾದಳು... ಕೈ ತರಚು ಗಾಯಕ್ಕೆ ಡೆಟಾಲ್ ತಂದಳು, ಹತ್ತಿಯಲ್ಲಿ ಅದ್ದಿ ಅಲ್ಲಲ್ಲಿ ಹಚ್ಚತೊಡಗಿದ್ಲು ತಾನೆ "ಸ.. ಸ್... ಸ...." ಅಂತ ವಸಗುಡುತ್ತ... ನೋವಾಗುತ್ತಿದ್ದದ್ದು ನನಗಾದ್ರೂ ಅವಳು ಕಿವುಚುತ್ತಿದ್ದ ಮುಖ ನೋಡಿ ನನಗೆ ಅಂಥದ್ದರಲ್ಲೂ ನಗು ಬಂತು, ನಾ ನಗುತ್ತಿರುವುದ ನೋಡಿ ಸಿಡುಕಿದ್ಲು "ಏನ್ ನಗ್ತೀದೀರಾ, ಬೇಕಿತ್ತಾ ಇದು, ನೋವಾಗ್ತಿಲ್ವಾ" ಅಂದ್ಲು "ನೋವಾಗ್ತಿದೆ, ಎನ್ ಮಾಡ್ಲಿ ನನಗಿಂತ ನಿನಗೇ ಜಾಸ್ತಿ ಅನಿಸತ್ತೆ" ಅಂದೆ. "ಇಂಥ ಡೈಲಾಗುಗಳಿಗೆ ಏನ್ ಕಮ್ಮಿ ಇಲ್ಲ, ಅಂದಹಾಗೆ ಹೇಗಾಯ್ತು ಇದೆಲ್ಲ, **ಯಾವ ಹುಡುಗೀ ನೊಡೋಕೆ ಹೋಗಿ ಬಿದ್ರಿ**" ಅಂದ್ಲು "ಲೇ ರಾತ್ರಿ ಹನ್ನೊಂದಕ್ಕೆ ಯಾವ ಹುಡುಗಿ ಇರ್ತಾಳೇ ರಸ್ತೇಲೀ, ನೀನೊಳ್ಳೇ ಸರಿಹೋಯ್ತು.." ಅಂತ ಬಯ್ಯುತ್ತ ಆದದ್ದೆಲ್ಲ ಸವಿವರವಾಗಿ ವರದಿ ಒಪ್ಪಿಸಿದೆ.

"ಅದ ಹೇಗೆ ನಿಮಗೆ ಕಲ್ಲುಗಳು ಕಾಣಲಿಲ್ಲ, ರಸ್ತೇ ನೋಡಿಕೊಂಡು ಬರೋಕೆ ಆಗಲ್ವಾ, ನಿದಾನವಾಗಿ ಎಲ್ಲ ಕಡೆ ಗಮನ ಇಟ್ಕೊಂಡು ಗಾಡಿ ಓಡಿಸಬೇಕು" ಅಂತ ಉಪದೇಶ ಮಾಡಿದ್ಲು, "ಇಲ್ಲ ಕಲ್ಲು ಕಾಣಿಸಿದ್ವು, ಅದರಮೇಲೆ ಹತ್ತಿಸಿದ್ರೆ ಹೇಗೆ ಬೀಳ್ತೀನಿ ಅಂತ ಪ್ರಯೋಗ ಮಾಡಿ ನೋಡಿದೆ" ಅಂತ ಕಿರಿಕ್ಕು ಉತ್ತರಕೊಟ್ಟೆ, "ಒಳ್ಳೇದಕ್ಕೆ ಹೇಳಿದ್ರೆ ಜೋಕ್ ಮಾಡ್ತೀರಾ" ಅಂತ ಒಂದು ಗುದ್ದು ಕೊಟ್ಲು, ಅದೇ ಪೆಟ್ಟಾದ ಭುಜಕ್ಕೆ "ಅಮ್ಮಾ" ಅಂತ ಚೀರಿದೆ, "ರೀ ರೀ ಸಾರಿ ಸಾರಿ" ಅಂತನ್ನುತ್ತ ಮೆಲ್ಲಗೆ ನವಿರಾಗಿ ಸವರಿದ್ಲು, ಹಿತವಾಗಿತ್ತು. "ಅಮ್ಮ ಅಂತ ಚೀರಿದಿರಲ್ವಾ ಅವರಿಗೇ ಹೇಳ್ತೀನಿ ತಾಳಿ" ಅಂತಾ ಹೆದರಿಸಿದ್ಲು, "ಪ್ಲೀಜ ಅವರಿಗೆಲ್ಲ ಗೊತ್ತಾಗೋದು ಬೇಡ, ಸುಮ್ಮನೇ ಗಾಬರಿಯಾಗ್ತಾರೆ" ಅಂದೆ, "ಇನ್ನೊಮ್ಮೆ ಆಕ್ಸಿಡೆಂಟ್ ಮಾಡ್ಕೊತೀರಾ ಹಾಗಾದ್ರೆ, ಇಲ್ಲ ತಾನೆ ಆಣೆ ಮಾಡಿ" ಅಂತಂದ್ಲು "ಲೇ ಎನ್ ಹೇಳಿ ಕೇಳಿ ಮಹೂರ್ತ ಎಲ್ಲ ನೋಡಿಕೊಂಡು, ಮಾಡ್ಕೊಳ್ಳೊಕೆ ಅದೇನು ಮದುವೆನಾ, ಮದುವೆನೂ ದೊಡ್ಡ ಆಕ್ಸಿಡೆಂಟೆ ಬಿಡು ಆ ಮಾತು ಬೇರೆ" ಅಂದೆ ದುರುಗುಟ್ಟಿ ನೋಡಿದ್ಲು, ಮತ್ತೆ ಸಮಾಧಾನಿಸಲು ಮುಂದುವರೆಸಿದೆ "ಅಲ್ಲಾ ಕಣೆ, ಆಕ್ಸಿಡೆಂಟ್ ಅಂದ್ರೇನು, ಆಕಸ್ಮಿಕ, ಅಪಘಾತ... ಅದು ಆಕಸ್ಮಿಕವಾಗಿ ಆಗೋದು, ಕೆಲಸಾರಿ ತಪ್ಪು ಇರುತ್ತದೆ ಆದ್ರೆ ಬೇಕೆಂತಲೇ ಯಾರೂ ಆಕ್ಸಿಡೆಂಟ್ ಮಾಡ್ಕೋಳಲ್ಲ ಆಗಿ ಹೋಗುತ್ತೆ, ನಮ್ಮ ಎಚ್ಚರಿಕೆ ಎಲ್ಲ ನಾವು ತುಗೋತೀವಿ ಆದ್ರೂ ಕೆಲ ಸಾರಿ ಎನ್ ಮಾಡೋದು ದುರಾದೃಷ್ಟ" ಅಂದೆ, "ಅದ್ಯಾವ ಹುಡುಗೀ ದೃಷ್ಟೀ ತಾಗಿದೆಯೊ ನಿಮ್ಗೆ" ಅಂತಂದು ಪೊರಕೆಯ ನಾಲ್ಕು ಕಡ್ಡಿ ತಂದು ಅದೇನೋ ಬಡಬಡಿಸಿ, ಮೂಲೇಲಿಟ್ಟು ಸುಟ್ಟಳು, ಚಟಪಟಾಂತ ಸದ್ದು ಮಾಡಿ ಅದು ಉರಿಯುತ್ತಿದ್ದರೆ ನೋಡಿ ಎಷ್ಟು ದೃಷ್ಟಿ ಆಗಿದೆ ಅಂತನ್ನುತ್ತಿದ್ಲು, ನಾವೆಲ್ಲ ಹೀಗೆ ನಮ್ಮ ನಮ್ಮ ಸಮಾಧಾನಕ್ಕೆ ಹೀಗೆ ಎನೊ ನಂಬಿಕೆಗೆ ಮೊರೆ ಹೋಗುತ್ತೇವೆ, ನಮ್ಮ ದುರ್ಬಲವಾದ ಮನಸಿಗೆ ಅದೋಂಥರ ಆಸರೆಯಾಗಿ ನೆಮ್ಮದಿ ಸಿಗುತ್ತದೆ, ಅದರಿಂದ ಅವಳ ಮನಸು ಸ್ವಲ್ಪ ನಿರಾಳವಾಗಿ ಆಘಾತ ಕಮ್ಮಿಯಾಗುತ್ತದೆ ಅಂದ್ರೆ ನಾ ಎನು ನಂಬಲೂ ಸಿದ್ಧ. ಅಪಘಾತಗಳಾದಾಗ ಆಘಾತವಾಗೊದು ಸಹಜ ಅದನ್ನು ಸರಿಯಾಗಿ ನಿರ್ವಹಿಸಬೇಕು ಅಷ್ಟೇ, ಎಲ್ಲ ಮುಗಿದುಹೊಯ್ತು ಅನ್ನೊ ಮನೊ ಸ್ಥಿತಿಗೆ ಹೋಗಬಾರದು, ಮತ್ತೆ ಮರಳಿ ಸಹಜತೆ ಮರಳಿದರೇ ಜೀವನ...

ಅದೃಷ್ಟ ದುರಾದೃಷ್ಟಗಳ ಮಾತಿನಲ್ಲೇ "ನನ್ನ ಅದೃಷ್ಟ, ಹಿಂದೆ ಯಾವ ಗಾಡಿ ಬರುತ್ತಿರಲಿಲ್ಲ, ಹಿಂದೆ ಕಾರೊ ಬಸ್ಸೊ ಲಾರಿಯೊ ಬಂದಿದ್ರೆ, ಸೀದಾ ನಟ್ಟ ನಡುವೆ ರಸ್ತೇಲಿ ಬಿದ್ದುಕೊಂಡಿದ್ದೆ..." ಅವಳೇ ತಡೆದಳು ಮುಂದೇನೂ ಹೇಳದಂತೆ "ಬಿಟ್ಟು ಅನ್ನಿ, ಎಲ್ಲ ಒಳ್ಳೇದಾಯ್ತು, ಅಷ್ಟು ಸಾಕು" ಅಂದ್ಲು. **ಒಂದೇ ಒಂದು ಘಟನೆಯಲ್ಲಿ ಅದೃಷ್ಟ, ದುರಾದೃಷ್ಟ ಹೇಗೆ ಮಿಳಿತವಾಗಿರುತ್ತಲ್ಲ ಅಂತ ನನಗೆ ಸೋಜಿಗವೆನಿಸಿತು.** "ಇನ್ಮೆಲೆ ಬಸ್ಸಿನಲ್ಲೇ ಓಡಾಡಿ, ಬೈಕು ಬೇಡ" ಅಂತ ರಾಗ ತೆಗೆದ್ಲು, "ನನಗೇಕೊ ಹೆದರಿಕೆ, ಏನಾದ್ರೂ ಆದ್ರೆ" ಅಂತ ಬಾಚಿ ತಬ್ಬಿಕೊಂಡ್ಲು, ಎದೆಗವಳು ಆತುಕೊಂಡಿದ್ದಕ್ಕೆ ಪಕ್ಕೆಲುಬು ಮತ್ತಷ್ಟು ನೊವಾಯ್ತು ನಾ ಹೇಳಲಿಲ್ಲ, ಅವಳಿಗೆ ನನ್ನದೇ ಚಿಂತೆಯಾಗಿ ಭಯ ಮೂಡಿತ್ತು, ಅದನ್ನ ನಾ ಹೋಗಲಾಡಿಸಬೇಕಿತ್ತು. "ನೀ ಈರುಳ್ಳಿ ಹೆಚ್ಚುವಾಗ ಕೈ ಕುಯ್ದುಕೊಂಡ್ರೆ ಎನ್ ಮಾಡ್ತೀಯಾ" ಅಂದೆ, "ಡೆಟಾಲ್ ಹಚ್ಚಿಕೊಂಡು ಪಟ್ಟಿ ಕಟ್ತೀನಿ" ಅಂದ್ಲು "ಆಮೇಲೆ ಮತ್ತೆ ಉಳಿದ ಈರುಳ್ಳಿ ಹೆಚ್ಚುತ್ತೀಯೋ ಇಲ್ಲ ಈರುಳ್ಳಿ ಹೆಚ್ಚುವುದೇ ಬಿಡುತ್ತೀಯೊ?" ಅಂತ ಪ್ರಶ್ನಿಸಿದೆ "ಹೆಚ್ತೀನೀ ಸ್ವಲ್ಪ ನೋಡಿಕೊಂಡು ಹೆಚ್ತೀನಿ" ಅಂದ್ಲು "ಅದೇ, ಅಪಘಾತ ಆಯ್ತು ಅಂತ ಬೈಕ್ ಬೇಡ ಅಂದ್ರೆ, ಬಸ್ಸು ಎಲ್ಲ ಸಂಪೂರ್ಣ ಸುರಕ್ಷಿತಾನಾ? ಅಲ್ಲಿ ಎಲ್ಲೊ ಸೀಟು ಸಿಗದೇ ಜೊತು ಬಿದ್ದು ಬರುವಾಗ ಜಾರಿ ಬಿದ್ದರೆ, ಕಾಯುವಾಗಲೇ ಫುಟ್ಪಾತ್ ಮೇಲೆ ಬಸ್ಸು ಏರಿದ್ರೆ, ಅಪಘಾತ ಎಲ್ಲಿ ಬೇಕಾದ್ರೂ ಆಗಬಹುದು, ಅದೂ ಬರೀ ಇಲ್ಲೆ ಅಂತ ನಿರ್ದಿಷ್ಟ ಸ್ಥಾನದಲ್ಲಿ ಅಲ್ಲ, ನಿಜ ಇನ್ನು ಮೆಲೆ ಬೈಕು ಹುಷಾರಾಗಿ ಓಡಿಸು ಅಂತಂದ್ರೆ ಸರಿ, ಬಿಟ್ಟು ಬಿಡು ಅಂದ್ರೆ ಹೇಗೆ" ಅಂದೆ, "ನೀವು ಏನೊ ಒಂದು ಮಾತು ಹೇಳಿ ನನ್ನ ಒಪ್ಪಿಸಿಬಿಡ್ತೀರಿ" ಅಂತ ಕುಸುಗುಟ್ಟಿದ್ಲು. "ಆಯ್ತು ಜೊರಾಗಿ ಓಡಿಸಬೇಡಿ, ನೀವು ಲೇಟಾಗಿ ಬಂದ್ರೂ ನಾನೇನೂ ಕಾಡಿಸಲ್ಲ, ಜಗಳ ಮಾಡಲ್ಲ, ಎನ ನೀವೇನೂ ರೆಸಿಂಗ್ ಬೈಕ್ ಓಡಿಸೊರ ಹಾಗೆ ಆ ಗ್ಲೌಸು, ಜಾಕೆಟ್ಟು ಹಾಕೊಂಡು ಹುಡಿಗೀರ ಮುಂದೆ ಸ್ಟೈಲು ಹೊಡೆಯೊದು ಏನ್ ಬೇಡ" ಅಂದ್ಲು, "ಲೇ ನಾ ಜೋರಾಗಿ ಓಡಿಸಲ್ಲ, ನಿನಗೇ ಗೊತ್ತು, ಏನೊ ರಸ್ತೆ ಖಾಲಿ ಇತ್ತು ಅಂತ ಸ್ವಲ್ಪ ಸ್ಪೀಡಿನಲ್ಲಿದ್ದೆ, ಇನ್ನು ಆ ಜಾಕೆಟ್ಟು ಗ್ಲೌಸು ಹಾಕಿಕೊಂಡಿದ್ದರಿಂದಲೇ ಕೈಯೆಲ್ಲ ಸ್ವಲ್ಪ್ ತರಚುಗಾಯಗಳೊಂದಿಗೆ ಬಚಾವಾಗಿದ್ದು, ಅದಿಲ್ಲದಿದ್ರೆ ಅಷ್ಟೆ" ಅಂದೆ "ಹಾಂ ಹಾಂ ಅದೂ ಸರಿ ಗ್ಲೌಸ್ ಹಾಕೊಳ್ಳಿ ಸ್ಟೈಲ್ ಎಲ್ಲ ಬೇಡ" ಅಂದ್ಲು. ಜಾಕೆಟ್ಟು ಒಂದು ಪಕ್ಕ ಕಿತ್ತು ಬಂದಿತ್ತು, ಗ್ಲೌಸ್ ಹರಿದಿತ್ತು, ನಾನೇ ಹೊಸದು ಕೊಡಿಸುತ್ತೇನೆ ಅಂದ್ಲು, ನಾನೂ ಖುಶಿಯಾದೆ...

"ಎದೆಗೆ ಸ್ವಲ್ಪ ಜೊರಾಗಿ ಪೆಟ್ಟು ಬಿದ್ದಿದೆ ಅನಿಸತ್ತೆ" ಅಂದ್ಲು "ಆ ಎದೆಯೊಳ್ಗಿರುವ ನಿನಗೇನು ಆಗಿಲ್ಲ ಬಿಡು" ಅಂದ್ರೆ ನಸುನಗುತ್ತ ನಾಚಿದಳು, ಅಯೊಡಿಕ್ಸ ತೆಗೆದುಕೊಂಡು ಪಕ್ಕೆಲುಬಿಗೆ ಸ್ವಲ್ಪ ಹಚ್ಚುತ್ತ ಪಕ್ಕದಲ್ಲೆ ಮಲಗಿದಳು, "ನಾಳೆ ಡಾಕ್ಟರ ಹತ್ರ ಹೋಗೊಣ, ಏನಕ್ಕೂ ಒಂದು ಸಾರಿ ಪಕ್ಕೆಲುಬು ತೋರಿಸಿಕೊಂಡು ಬರೊಣ, ಬಹಳ ಉಬ್ಬಿದೆ" ಅಂದ್ಲು "ಸರಿ ಆ ಮೊನ್ನೆ ಹೋಗಿದ್ವಲ್ಲ ಅದೇ ಕ್ಲಿನಿಕಗೆ ಕರಕೊಂಡು ಹೋಗ್ತೀಯಲ್ಲ, ನರ್ಸು ಅದೇ ನಮ್ಮ ನರ್ಗೀಸ್ ಹತ್ರ" ಅಂದೆ "ಹಾಂ!.. ಹೂಂ ಅಲ್ಲೇ ಕರಕೊಂಡು ಹೋಗ್ತೀನಿ, ಅದೇ ನಿಮ್ಮ ನರ್ಗಿಸಗೆ ಹೇಳ್ತೀನಿ, ಪಕ್ಕೆಲುಬು ಮುರಿದಿಲ್ಲ ಅಂದ್ರೂ, ಮುರಿದು ಕಳಿಸು ಅಂತ ನಾಲ್ಕು ದಿನಾ ಮನೇಲಿ ಬಿದ್ಕೊಳ್ಳಿ ಗೊತ್ತಾಗುತ್ತೆ" ಅಂತದ್ಲು. ನೋವಿತ್ತು ಆದ್ರೂ ನಗು ಬರುತ್ತಿತ್ತು, ನಿದ್ದೆ ಬರುವ ಹಾಗಿರಲಿಲ್ಲ ಪೇನ ಕಿಲ್ಲರ(ನೋವುನಿವಾರಕ) ಥರ ಅವಳ ಮಾತುಗಳು ನೋವು ಮರೆಸುತ್ತಿದ್ವು...

ಮತ್ತೆ ಸಿಗೊಣ ಹೀಗೆ ಅಪಘಾತದಲ್ಲಿ... ಅಯ್ಯೊ ಬಿಟ್ಟು ಅನ್ನಿ... ಮತ್ತೆ ಮಾತುಕತೆಗಳಲ್ಲಿ...

ಮೊನ್ನೆ ಗುರುವಾರ ಸ್ವಲ್ಪ ಚಿಕ್ಕ ಆಕ್ಸಿಡೆಂಟ ಆಯ್ತು, ಎನೂ ಬಹಳ ಪೆಟ್ಟಾಗಿಲ್ಲ, ಸಧ್ಯ ದೇವರ ದಯೆಯಿಂದ ಚೆನ್ನಾಗಿದ್ದೇನೆ, ಮತ್ತೆ ಬರೆಯುತ್ತಿದ್ದೇನೆ ಕೂಡ, ಅದೃಷ್ಟ ನನ್ನ ಹಿಂದೆ ಯಾವ ವಾಹನವೂ ಬರ್ತಿರಲಿಲ್ಲ, ಅಂತೂ ಬದುಕು ಒಂದು ಹೊಸಾ ಅನುಭವ ಕೊಟ್ಟಿದೆ, ನನಗಾದ ಅನುಭವದ ಆಧಾರದ ಮೇಲೆ ಕೆಲ ಉಪದೇಶ.. ಛೆ ಛೆ.. ಸಲಹೆ ಕೊಡುತ್ತಿದ್ದೇನೆ ಸರಿಯೆನ್ನಿಸಿದರೆ ಅಳವಡಿಸಿಕೊಳ್ಳಿ, ನನಗಾಗಿರುವುದು ಹೀಗೆ ಯಾರಿಗೊ ಆಗದಿರಲಿ ಅನ್ನೋದೆ ನನ್ನ ಆಶಯ..

- ✓ ರಾತ್ರಿ ರಸ್ತೆಗಳು ಖಾಲಿ ಇದ್ದರೂ ಎಲ್ಲಿಂದ ಯಾವಕಡೆ ವಾಹನ ಬರುತ್ತವೆ ಗೊತ್ತಾಗಲ್ಲ ತಿರುವುಗಳಲ್ಲೆಲ್ಲ ಹುಷಾರಾಗಿದ್ದರೆ ಒಳ್ಳೇದು
- ✓ ಕತ್ತಲೆಯಲ್ಲಿ ರಸ್ತೆಯ ಗುಂಡಿ, ಕಲ್ಲುಗಳು ಸರಿಯಾಗಿ ಕಾಣಿಸುವುದಿಲ್ಲ, ಅದಕ್ಕೆ ರಸ್ತೆಯತ್ತ ವಿಶೇಷ ಗಮನವಿರಲಿ.
- ✓ ಸಾಧ್ಯವಾದಷ್ಟು ಕಾರು ಬಸ್ಸು ಹಿಂಬಾಲಿಸದಿರಿ, ಅಂತರ ಕಾಯ್ದುಕೊಳ್ಳಿ, ಈ ನಾಲ್ಕು ಚಕ್ರದ ವಾಹನಗಳ ಕೆಳಗೆ ಗುಂಡಿಗಳೆಲ್ಲ ಕಾಣದೆ ಅನಿರೀಕ್ಷಿತವಾಗಿ ನಿಯಂತ್ರಣ ತಪ್ಪುವ ಸಂಭವ ಜಾಸ್ತಿ.
- ✓ ಮುಖ್ಯವಾಗಿ ದೇಹದ ಬಹು ಪಾಲು ಮುಚ್ಚುವಂತೆ, ಬೂಟು, ಒಳ್ಳೆ ಗುಣಮಟ್ಟದ ಜಾಕೆಟ್ಟು, ಗ್ಲೌಸು (ಸಂಪೂರ್ಣ ಕೈಬೆರಳು ಮುಚ್ಚುವ) ಧರಿಸಿ, ನನ್ನ ಮಟ್ಟಿಗೆ ಕೆಲವೇ ಕೆಲವು ತರಚು ಗಾಯಗಳೊಂದಿಗೆ ನಾ ಬಚಾವಾಗಿದ್ದು ಸಂಪೂರ್ಣ ಎನೂ ಹೊರಗಿರದ ಹಾಗೆ ಇದೆಲ್ಲ ಧರಿಸಿದ್ದೆ ಕಾರಣ.
- ✓ ಹೆಲ್ಮೆಟ್ಟು ಹೇಗೂ ಕಡ್ಡಾಯವಿದೆ ಅದನ್ನು ಪಾಲಿಸಿ.
- ✓ ಅನವಶ್ಯಕ ಸ್ಪೀಡಿನಲ್ಲಿ ಹೋಗೊದು ಬೇಡ ಒಂದೈದು ನಿಮಿಷ ಲೇಟಾದರೂ ಪರವಾಗಿಲ್ಲ, ಆದರೆ ಐದು ನಿಮಿಷ ಉಳಿಸಲು ಹೋಗಿ ಮುಂದಿನ ಬದುಕಲ್ಲಿ ಬರುವ ವರ್ಷಗಳೆಲ್ಲ ಕಳೆದುಕೊಳ್ಳೋದು ಬೇಡ, ಇದು ನನಗೂ ಅನ್ವಯ ಆಗುತ್ತದೆ.

ಹೀಗೆ ನಿಮ್ಮಲ್ಲೂ ಇವನ್ನು ಬಿಟ್ಟು ಕೆಲ ಇನ್ನೂ ಒಳ್ಳೆಯ ಸಲಹೆಗಳಿದ್ದರೆ ಹಂಚಿಕೊಳ್ಳಿ...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com . ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...

**http://blog.telprabhu.com**